ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ
ಭಾರತೀಯ ಕೃಷಿ ಅನುಸಂದಾನ ಪರಿಷತ್, ನವದೆಹಲಿ
ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಉಡುಪಿ - 576 213

ಕರಾವಳಿ ಕೃಷಿ

ತ್ರೈಮಾಸಿಕ ಕೃಷಿಕರ ವಾರ್ತಾ ಪತ್ರಿಕೆ

ಜುಲೈ-ಸೆಪ್ಟೆಂಬರ್ 2019 ಸಂಪುಟ-7 , ಸಂಚಿಕೆ-2

ಕಾಳು ಮೆಣಸಿನಲ್ಲಿ ಸಮಗ್ರ ಬೆಳೆ ನಿರ್ವಹಣೆ

ದಿನಾಂಕ 15.07.2019 ಅಂಡಾರು ಗ್ರಾಮ, ಕಾರ್ಕಳ ತಾಲೂಕು "ಕಾಳು ಮೆಣಸಿನಲ್ಲಿ ಸಮಗ್ರ ಬೆಳೆ ನಿರ್ವಹಣೆ" ಕುರಿತು ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಶ್ರೀ ಗುಣಪಾಲ ಕಡಂಬ, ಪ್ರಗತಿಪರ ಕೃಷಿಕರು ಶಿರ್ಲಾಲು ಗ್ರಾಮ ಇವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ನೆರೆದಿದ್ದ ರೈತರಿಗೆ ಕಾಳುಮೆಣಸಿನಲ್ಲಿ ಬರುವ ರೋಗ ಬುಡಕೊಳೆರೋಗ ನಿಯಂತ್ರಣದ ಬಗ್ಗೆ ಕೃಷಿ ವಿಜ್ಞಾನ ಕೇಂದ್ರ ಬ್ರಹ್ಮಾವರ ತೋಟಗಾರಿಕೆ ವಿಜ್ಞಾನಿಗಳಾದ ಶ್ರೀ ಚೈತನ್ಯ ಹೆಚ್.ಎಸ್ ಸಮಗ್ರ ಮಾಹಿತಿ ನೀಡಿದರು. ಅರ್ಕ ಸೂಕ್ಷ್ಮ ಜೀವಿಗಳ ಮಿಶ್ರಣ ಮತ್ತು ಅರ್ಕ ಆಕ್ಟಿನೋ ಪ್ಲಸ್ ಜೀವಾಣು ಕೊಳೆರೋಗದ ನಿಯಂತ್ರಣ, ಕಾಳು ಮೆಣಸಿನಲ್ಲಿ ಬರುವ ಉದುರುವಿಕೆ ಸಮಸ್ಯೆ ಸೂಕ್ಷ್ಮ ಪೋಷಕಾಂಶ ಮಿಶ್ರಣ pepper special ಬಳಸುವುದರ ಬಗ್ಗೆ ಪದ್ಧತಿ ಪ್ರಾತ್ಯಕ್ಷಿಕೆ ಮಾಡಿ ರೈತರಿಗೆ ಮನದಟ್ಟು ಮಾಡಲಾಯಿತು. ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರ ಬ್ರಹ್ಮಾವರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ.ಧನಂಜಯ ಬಿ ಅವರು ಭಾಗವಹಿಸಿ ಕಾಳು ಮೆಣಸಿನ ಸಮಗ್ರ ಬೆಳೆ ನಿರ್ವಹಣೆ ಕುರಿತು ಮಾತನಾಡಿದರು. ಡಾ. ಮಧುರಿಮ ವಿನೋದ್, ಸಹ ಸಂಶೋಧಕರು, ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ, ZBNF ಇವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾಳು ಮೆಣಸಿನಲ್ಲಿ ಬರುವ ಕೀಟ ಮತ್ತು ಅದರ ನಿಯಂತ್ರಣದ ಕುರಿತು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 50 ರೈತರು ಭಾಗವಹಿಸಿದ್ದು ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

ಗೇರು ಬೆಳೆಯ ರಾಷ್ಟ್ರೀಯ ತರಬೇತಿ

ಬ್ರಹ್ಮಾವರ, ಜು.31: ಗೇರು ಉತ್ಪನ್ನಕ್ಕೆ ಉತ್ತಮ ಬೇಡಿಕೆ ಇರುವುದರಿಂದ ಇದು ಭವಿಷ್ಯದಲ್ಲಿ ಪ್ರಾಮುಖ್ಯತೆ ಪಡೆಯುವ ಬೆಳೆಯಾಗಿದೆ ಎಂದು ಶಿವಮೊಗ್ಗ ಕೇಂದ್ರದ ವಿಸ್ತರಣ ನಿರ್ದೇಶಕ ಡಾ. ಎಸ್ ಪಿ ನಟರಾಜ್ ಹೇಳಿದರು. ಅವರು ಬುಧವಾರ ಬ್ರಹ್ಮಾವರದ ಧರ್ಮಾವರ ಅಡಿಟೋರಿಯಂನಲ್ಲಿ ಕೊಚ್ಚಿಯ ಗೇರು ಮತ್ತು ಕೋಕೋ ಅಭಿವೃದ್ಧಿ ಕೇಂದ್ರ, ಬ್ರಹ್ಮಾವರ ವಲಯ ಕೃಷಿ ಮತ್ತು ತೋಟಗಾರಿಕಾ ಸಂಶೊಧನ ಕೇಂದ್ರ, ಬ್ರಹ್ಮಾವರ ಕೃಷಿ ವಿಜ್ಞಾನ ಕೇಂದ್ರದ ಆಶ್ರಯದಲ್ಲಿ ಮೂರು ದಿನಗಳ ಗೇರು ಬೆಳೆ ರಾಷ್ಟ್ರೀಯ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಗೇರು ಕಡಿಮೆ ನೀರಿನಲ್ಲಿ ವಿಭಿನ್ನ ಹವಮಾನದಲ್ಲಿ ಬೆಳೆಯುವ ಬೆಳೆಯಾಗಿದೆ. ಗೇರಿನ ವಿಭಿನ್ನ ತಳಿ ಬೆಳೆಯುವ ವಿಧಾನ, ಕೀಟ ಹಾಗೂ ಇತರ ಬಾಧೆಗಳ ಕುರಿತು ಸಂಶೋಧನೆ ನಡೆಸುವ ಅಗತ್ಯವಿದೆ ಎಂದರು. ಪುತ್ತೂರು ಕೇಂದ್ರದ ನಿರ್ದೇಶಕ ಡಾ. ಎಂ. ಗಂಗಾಧರ ನಾಯಕ್, ಬ್ರಹ್ಮಾವರದ ಸಹ ಸಂಶೋಧನಾ ನಿರ್ದೇಶಕ ಡಾ. ಎಸ್. ಯು. ಪಾಟೀಲ್, ಬ್ರಹ್ಮಾವರ ಡಿಪ್ಲೋಮಾ ಕಾಲೇಜಿನ ಪ್ರಾಂಶುಪಾಲ ಡಾ. ಸುಧೀರ್ ಕಾಮತ್, ಕೆವಿಕೆ ಮುಖಸ್ಥ ಡಾ. ಧನಂಜಯ ಬಿ ಉಪಸ್ಥಿತರಿದ್ದರು. ಕೊಚ್ಚಿನ್ ಕೇಂದ್ರದ ನಿರ್ದೇಶಕ ಡಾ. ವೆಂಕಟೇಶ್ ಎನ್. ಹುಬ್ಬಳ್ಳಿ ಸ್ವಾಗತಿಸಿ, ತರಬೇತಿಯ ಪ್ರಾಮುಖ್ಯ ತಿಳಿಸಿದರು. ಡಾ ಎನ್. ಈ. ನವೀನ್ ಕಾರ್ಯಕ್ರಮ ನಿರೂಪಿಸಿ, ಡಾ. ಎಂ. ಶಂಕರ್ ವಂದಿಸಿದರು.

ಗೇರು ಬೆಳೆಯಲ್ಲಿ ಸುಧಾರಿತ ಬೇಸಾಯ ಪದ್ಧತಿ

ದಿನಾಂಕ 08.08.2019 ರಂದು ಬೈರಂಪಳ್ಳಿ ಗ್ರಾಮದಲ್ಲಿ ಗೇರು ಬೆಳೆಯಲ್ಲಿ ಸುಧಾರಿತ ಬೇಸಾಯ ಪದ್ಧತಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಬೈರಂಪಳ್ಳಿ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗಾಮಾಭಿವೃದ್ಧಿ ಯೋಜನೆ ಅವರ ಸಂಯೋಜನೆಯೊಂದಿಗೆ

ಬೃಹತ್ ವೃಕ್ಷಾರೋಹಣ ಅಭಿಯಾನ – ಕೃಷಿಕ ಗೋಷ್ಠಿ ಪುಷ್ಪ ಕೃಷಿಯಲ್ಲಿ ವೈಜ್ಞಾನಿಕ ಬೇಸಾಯ ಕಾರ್ಯಕ್ರಮ ಬೃಹತ್ ಪ್ರಮಾಣದಲ್ಲಿ ಗಿಡ ನೆಡುವ ಕಾರ್ಯಕ್ರಮ

ಐ.ಸಿ.ಎ.ಆರ್ – ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ ಮತ್ತು ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್, ಉಡುಪಿ ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ 17.09.2019 ರಂದು ಬೃಹತ್ ವೃಕ್ಷಾರೋಹಣ ಅಭಿಯಾನ – ಕೃಷಿಕ ಗೋಷ್ಠಿ ಪುಷ್ಪ ಕೃಷಿಯಲ್ಲಿ ವೈಜ್ಞಾನಿಕ ಬೇಸಾಯ ಕಾರ್ಯಕ್ರಮವನ್ನು ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀಮತಿ ಭುವನೇಶ್ವರಿ, ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಉಡುಪಿ ಇವರು ಉಡುಪಿ ಮಲ್ಲಿಗೆಯಲ್ಲಿ ಈ ವರ್ಷದ ಅಧಿಕ ಮಳೆಯಿಂದ ಸಾಕಷ್ಟು ರೋಗಗಳು ಕಂಡು ಬಂದಿದ್ದು ಇದಕ್ಕೆ ಪೂರಕವಾದ ವೈಜ್ಞಾನಿಕ ಕ್ರಮವನ್ನು ನಮ್ಮ ವಿಜ್ಞಾನಿಗಳು ಕೈಗೊಂಡಿದ್ದಾರೆ ಮತ್ತು ಉಡುಪಿ ಮಲ್ಲಿಗೆಗೆ ಮಾರ್ಕೆಟ್ ಬೆಲೆ ಜಾಸ್ತಿಯಾಗಿದೆ ಎಂದು ತಿಳಿಸಿದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಬಿ. ಧನಂಜಯ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೆ.ವಿ.ಕೆ, ಬ್ರಹ್ಮಾವರ ಇವರು ಮಾತನಾಡುತ್ತ ಈ ದಿನವನ್ನು ಮೋದಿ ಜನ್ಮ ದಿನಾಚರಣೆಯ ಅಂಗವಾಗಿ ಬೃಹತ್ ವೃಕ್ಷಾ ಆಂದೋಲನದ ಪರವಾಗಿ ಪ್ರತಿ ಕೆವಿಕೆಯಲ್ಲಿ ಸಾವಿರ ಗಿಡಗಳನ್ನು ನೆಡುವ ಗುರಿಯನ್ನು ಪಡೆದಿರುತ್ತೇವೆ. ಈ ದಿನ ಸುಮಾರು 600 ಗಿಡಗಳು ಮತ್ತು ತೊಂಡಗಳನ್ನು ಮಾಡಿ ತಯಾರು ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ಬಂದ ಎಲ್ಲ ರೈತರು ಈ ಕಾರ್ಯಕ್ರಮದಲ್ಲಿ ಗಿಡಗಳನ್ನು ನೆಟ್ಟು ಈ ಆಂದೋಲನಕ್ಕೆ ಕೈಜೋಡಿಸಬೇಕೆಂದು ವಿನಂತಿಸಿದರು. ಮುಖ್ಯ ಅತಿಥಿಯಾದ ಡಾ. ಸುಧೀರ್ ಕಾಮತ್, ಪ್ರಾಂಶುಪಾಲರು, ಕೃಷಿ ಡಿಪ್ಲೋಮಾ ಮಹಾ ವಿದ್ಯಾಲಯ, ಬ್ರಹ್ಮಾವರ ಇವರು ಮಾತನಾಡುತ್ತ ಉಡುಪಿ ಮಲ್ಲಿಗೆಗೆ ತುಂಬಾ ಪ್ರಾಮುಖ್ಯತೆ ಇದೆ, ಕೀಟ ಮತ್ತು ರೋಗ ಬಂದರೆ ಹೇಗೆ ಅದರ ನಿರ್ವಹಣೆಯನ್ನು ಮಾಡಬಹುದು ಎಂದು ನಾವು ತಿಳಿದುಕೊಂಡರೆ ಮಲ್ಲಿಗೆ ಕೃಷಿಯನ್ನು ಉತ್ತಮವಾಗಿ ಮಾಡಬಹುದು. ವೈಜ್ಞಾನಿಕ ಬೇಸಾಯ ಮಾಡಿದರೆ ಮಲ್ಲಿಗೆಯಲ್ಲಿ ಹೆಚ್ಚಿನ ಉತ್ಪತ್ತಿ ಪಡೆಯಬಹುದೆಂದು ತಿಳಿಸಿದರು. ಇನ್ನೋರ್ವ ಮುಖ್ಯ ಅತಿಥಿಯಾದ ಶ್ರೀ ಸಂಜೀವ ನಾಯ್ಕ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಕುಂದಾಪುರ ಇವರು ಮಾತನಾಡುತ್ತ ಮಲ್ಲಿಗೆ ಬೆಳೆಗೆ ಯಾವ ರೋಗ ಬಂದಿದೆ ಎಂದು ತಿಳಿದುಕೊಳ್ಳುವುದು ಉತ್ತಮ ಮತ್ತು ಅದಕ್ಕೆ ಸರಿಯಾದ ವೈಜ್ಞಾನಿಕ ಕ್ರಮವನ್ನು ಕೈಗೊಳ್ಳಬೇಕು, 30 ಮಲ್ಲಿಗೆ ಗಿಡ ಇದ್ದರೆ ಮನೆಯ ಖರ್ಚು ನಿಭಾಯಿಸಬಹುದೆಂದು ತಿಳಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಡಾ. ಎಸ್. ಯು. ಪಾಟೀಲ್, ಸಹ ವಿಸ್ತರಣಾ ಮತ್ತು ಸಹ ಸಂಶೋಧನಾ ನಿರ್ದೇಶಕರು, ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಬ್ರಹ್ಮಾವರ ಇವರು ಮಾತನಾಡುತ್ತ ಮಲ್ಲಿಗೆ ಹೂವಿನ ಬೆಳೆಗಾರರಾಗಿ ಹೂವನ್ನು ಬೆಳೆದರೆ ಮಾತ್ರ ಸಾಲದು ಅದಕ್ಕೆ ಸರಿಯಾದ ಮಾರ್ಕೆಟ್ ವ್ಯವಸ್ಥೆ ಮಾಡಿಕೊಳ್ಳಬೇಕು ಮತ್ತು ಲಾಭದಾಯಕವಾಗಿ ಹೇಗೆ ಮಾರ್ಕೆಟ್ ಮಾಡಬಹುದು ಎನ್ನುವುದರ ಕುರಿತು ಚರ್ಚಿಸಿಕೊಳ್ಳಬೇಕು, ಹೂವನ್ನು ಬೆಳೆದು ಅದ ಸರಿಯಾಗಿ ಮಾರ್ಕೆಟ್ ಮಾಡುವ ಶಕ್ತಿ ಇರಬೇಕು ಎಂದು ತಿಳಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಡಾ. ಎನ್. ಈ. ನವೀನ್, ವಿಜ್ಞಾನಿಗಳು (ಬೇಸಾಯ ಶಾಸ್ತ್ರ), ಕೆ.ವಿ.ಕೆ, ಬ್ರಹ್ಮಾವರ ಇವರು ನಿರ್ವಹಿಸಿದರು. ಶ್ರೀ ಚೈತನ್ಯ ಹೆಚ್. ಎಸ್ ವಿಜ್ಞಾನಿಗಳು (ತೋಟಗಾರಿಕೆ), ಕೆ.ವಿ.ಕೆ, ಬ್ರಹ್ಮಾವರ ಇವರು ಪ್ರಾಸ್ತಾವಿಕವ ಮಾತನಾಡಿದರು. ಶ್ರೀ ಗುರುಪ್ರಸಾದ್, ಸಹಾಯಕ ತೋಟಗಾರಿಕೆ ನಿರ್ದೇಶಕ ಉಡುಪಿ ಇವರು ವಂದಿಸಿದರು. ಕಾರ್ಯಕ್ರಮದ ನಂತರ ಭಾಗವಹಿಸಿದ ಪ್ರತಿಯೊ ಕೃಷಿ ಮಹಿಳೆ ಮತ್ತು ಕೃಷಿ ಡಿಪ್ಲೋಮ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಸುಮಾ 600 ಗಿಡಗಳನ್ನು ನೆಟ್ಟು ಈ ಆಂದೋಲನಕ್ಕೆ ಕೈಜೋಡಿಸಿದರು.

ಅಡಿಕೆ ಬೇರು ಹುಳ ನಿರ್ವಹಣೆ ಪ್ರಾತ್ಯಕ್ಷಿಕೆ ಕಾರ್ಯಕ್ರಮ

ಹೆಬ್ರಿ: ಸೆ. 21: ಬ್ರಹ್ಮಾವರ ಕೃಷಿ ವಿಜ್ಞಾನ ಕೇಂದ್ರ ಮತ್ತು ಅಜೆಕಾರು ಆತ್ಮ ಯೋಜನೆ ವತಿಯಿಂದ ಅಜೆಕಾರು, ಉಪೇಂದ್ರ ನಾಯ್ಕ ಅವರ ಮನೆ ವಠಾರದಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ರೈತ ಮುಖಂಡ ಧನಂಜಯ್ ಜೈನ್ ಉದ್ಘಾಟಿಸಿದರು. ಸುಂದರ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥ ಡಾ. ಬಿ ಧನಂಜಯ ಅವರು ಅಡಿಕೆ ಬೇರು ಹುಳದ ಹಾನಿ, ಅದರಿಂದಾಗುವ ನಷ್ಟದ ಬಗ್ಗೆ ರೈತರಿಗೆ ತಿಳಿಸಿ, ಸಮಗ್ರ ಪೀಡೆ ನಿರ್ವಹಣೆಯ ಅನಿವಾರ್ಯತೆ ಬಗ್ಗೆ ವಿವರಣೆ ನೀಡಿದರು. ಕೀಟಶಾಸ್ತ್ರಜ್ಞ ಡಾ.ಸಚಿನ್ ಯು.ಎಸ್. ಬೇರು ಹುಳದ ಸಂಪೂರ್ಣ ಮಾಹಿತಿಯೊಂದಿಗೆ ಅದರ ಜೀವನ ಚಕ್ರ ಹಾನಿಯ ಪ್ರಮಾಣ ಮತ್ತು ಸಮಗ್ರ ಪೀಡೆ ನಿರ್ವಹಣೆ ವಿಧಾನಗಳ ಬಗ್ಗೆ ವಿವರಣೆ ನೀಡಿದರು. ಕೇಂದ್ರದ ವತಿಯಿಂದ ಆಯ್ದ ರೈತರಿಗೆ, ಬೇರು ಹುಳದ ಹತೋಟಿಯ ಪರಿಕರ ವಿತರಿಸಿ, ಪ್ರಾತ್ಯಕ್ಷಿಕೆ ನೀಡಲಾಯಿತು. ಅಶ್ವಥ್ ನಾರಾಯಣ್ ಪ್ರಭು ಮೊದಲಾದವರು ಉಪಸ್ಥಿತರಿದ್ದರು ಅಜೆಕಾರು ಕೃಷಿ ಅಧಿಕಾರಿ ಸಿದ್ಧಪ್ಪ ತುಡುಬಿನ್ ಸ್ವಾಗತಿಸಿ, ಉಮಾಶ್ರೀ ವಂದಿಸಿದರು.

ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆ

ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಸಮ ಪೋಷಕಾಂಶ ನಿರ್ವಹಣೆ ಒಂದು ದಿನ ಒಳಾಂಗಣ ತರಬೇತಿಯನ್ನು ಕೃಷಿ ವಿಜ್ಞಾ ಕೇಂದ್ರ ಬ್ರಹ್ಮಾವರದಲ್ಲಿ 27.09.2019 ರಂ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಡಾ. ಧನಂಜಯ ಬಿ, ಹಿರಿಯ ವಿಜ್ಞಾನಿಗ ಹಾಗೂ ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂ ಬ್ರಹ್ಮಾವರ ಇವರು ಮಾತನಾಡಿ ಕರಾವಳಿಯ ಬೆಳೆಯಲಾದ ತೋಟಗಾರಿಕ ಮತ್ತು ಕೃಷಿ ಬೆಳೆಗಳಿಗೆ ಅನುಗುಣವಾಗಿ ಸಮ ಪೋಷಕಾಂಶ ನಿರ್ವಹಣೆಯನ್ನು ಮಾಡಬೇಕಾಗಿ ಸಲಹೆ ನೀಡಿದರು. ಕೆ.ವಿ ಬ್ರಹ್ಮಾವರದ ಮಣ್ಣು ವಿಜ್ಞಾನಿಗಳಾದ ಡಾ. ಜಯಪ್ರಕಾಶ್ ಆರ್ ತರಬೇತಿ ನೀಡುವು ಮೂಲಕ ರೈತರಿಗೆ ಮಣ್ಣು ಪರೀಕ್ಷೆ ಆಧಾರಿತ ಪ್ರಧಾನ ಮದ್ಯಮ ಹಾಗೂ ಕಿ ಪೋಷಕಾಂಶಗಳ ಬಳಕೆ ಮಾಡಬೇಕಾಗಿ ಸಲಹೆ ನೀಡಿದರು. ಇದರ ಜೊತೆ ಸಾವಯವ ಗೊಬ್ಬರಗಳು ಹಾಗೂ ಜೈವಿಕ ಗೊಬ್ಬರಗಳನ್ನು ಕೃಷಿ ಮತ್ತು ತೋಟಗಾರಿ ಬೆಳೆಗಳಲ್ಲಿ ಬಳಕೆ ಮಾಡಿ ಮಣ್ಣಿನ ಫಲವತ್ತತೆ ಹೆಚ್ಚಿಸಿಕೊಂಡು ರೈತರ ಇಳುವರಿಯ ಹೆಚ್ಚಿಸಿಕೊಳ್ಳಬೇಕಾಗಿ ಸಲಹೆ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 35 ರೈತ ಭಾಗವಹಿಸಿದ್ದು ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

ಸಂಪಾದಕರು: ಡಾ. ಬಿ. ಧನಂಜಯ
ಸಹ ಸಂಪಾದಕರು: ಶ್ರೀ ಚೈತನ್ಯ ಹೆಚ್. ಎಸ್., ಡಾ. ಎನ್. ಈ. ನವೀನ್, ಡಾ. ಜಯ ಪ್ರಕಾಶ್ ಆರ್., ಶ್ರೀ ಶ್ರೀನಿವಾಸ ಹೆಚ್. ಹುಲಕೋಟಿ, ಡಾ. ಸಚಿನ್ ಯು. ಎಸ್.
ಅಕ್ಷರ ಜೋಡಣೆ : ಶ್ರೀಮತಿ ಶೈಲಜ ಮತ್ತು ಶ್ರೀಮತಿ ಸುಷ್ಮಾ
ಪ್ರಕಾಶಕರು: ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಉಡುಪಿ–576213
ದೂರವಾಣಿ ಸಂಖ್ಯೆ: 0820–2563923, Email: kvkudupi@gmail.com, udupikvk@gmail.com

ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ
ಭಾರತೀಯ ಕೃಷಿ ಅನುಸಂದಾನ ಪರಿಷತ್, ನವದೆಹಲಿ
ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಉಡುಪಿ - 576 213

ಕರಾವಳಿ ಕೃಷಿ

ತ್ರೈಮಾಸಿಕ ಕೃಷಿಕರ ವಾರ್ತಾ ಪತ್ರಿಕೆ

ಅಕ್ಟೋಬರ್ – ಡಿಸೆಂಬರ್ 2019 ಸಂಪುಟ-7, ಸಂಚಿಕೆ-3

ಬಾಳೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ

ದಿನಾಂಕ 01.10.2019 ರಂದು ತಂತ್ರಜ್ಞಾನ ಪರಿಶೀಲನಾ ಅಡಿಯಲ್ಲಿ ಒಂದು ದಿನದ ಹೊರಾಂಗಣ ತರಬೇತಿ ಕಾರ್ಯಕ್ರಮವನ್ನು ಶಿರ್ವ ಗ್ರಾಮದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿ ಕಾರ್ಯಕ್ರಮದಲ್ಲಿ ಸುಮಾರು 15 ಬಾಳೆ ಬೆಳೆಗಾರರು ಭಾಗವಹಿಸಿದ್ದು ಡಾ. ಜಯಪ್ರಕಾಶ್ ಆರ್, ಮಣ್ಣು ವಿಜ್ಞಾನಿ, ಕೆ.ವಿ.ಕೆ, ಬ್ರಹ್ಮಾವರ ಇವರು ಬಾಳೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ ಬಗ್ಗೆ ಮಾಹಿತಿ ನೀಡಿ ಬಾಳೆ ಬೆಳೆಗೆ ಕಂತುಗಳಲ್ಲಿ ಮಣ್ಣು ಪರೀಕ್ಷೆ ಆಧಾರಿತ ರಸಗೊಬ್ಬರವನ್ನು ಕೊಡಬೇಕಾಗಿ ಸಲಹೆ ನೀಡಿದರು. ಮತ್ತು ಕಿರು ಪೋಷಕಾಂಶಗಳ ನಿರ್ವಹಣೆಗಾಗಿ ಬಾಳೆ ಸ್ಪೆಶಲ್ ಅನ್ನು ಬಳಕೆ ಮಾಡಬೇಕಾಗಿ ಸಲಹೆ ನೀಡಿದರು ಮತ್ತು ಬಾಳೆ ಬೆಳೆಯ ಬಗ್ಗೆ ಸಮಗ್ರ ಮಾಹಿತಿ ನೀಡಿದರು.

ಬದನೆ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ

ದಿನಾಂಕ 20.10.2019 ರಂದು ಶಿರ್ಲಾಲ ಗ್ರಾಮದಲ್ಲಿ ಬದನೆ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಗುಣಪಾಲ ಕಡಂಬ, ಪ್ರಗತಿಪರ ರೈತರು ಶಿರ್ಲಾಲು ಗ್ರಾಮ ಇವರು ವಹಿಸಿ ಮಾತನಾಡುತ್ತ, ಇತ್ತೀಚಿನ ದಿನಗಳಲ್ಲಿ ಶಿರ್ಲಾಲು ಗ್ರಾಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ತಾಂತ್ರಿಕ ನೆರವಿನಿಂದ ಸುಧಾರಿತ ಬೇಸಾಯ ಪದ್ಧತಿಯನ್ನು ಹೆಚ್ಚಿನ ರೈತರು ತರಕಾರಿ ಕೃಷಿಯಲ್ಲಿ ಅಳವಡಿಸಿಕೊಂಡಿದ್ದಾರೆ ಎಂದರು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ತರಕಾರಿ ಪ್ರಗತಿಪರ ರೈತರಾದ ಶ್ರೀ ಪದ್ಮರಾಜ ಜೈನ್ ಅವರು ನೆರವೇರಿಸಿ ಮಾತನಾಡುತ್ತ ಸ್ವಂತವಾಗಿ ತರಕಾರಿ ಕೃಷಿ ಮಾಡಿದ್ದಲ್ಲಿ ಹೆಚ್ಚಿನ ಆದಾಯ ಪಡೆಯಬಹುದು ಹಾಗೂ ವರ್ಷ ಪೂರ್ತಿ ತರಕಾರಿ ಬೆಳೆಯುವ ಬಗ್ಗೆ ಯೋಚನೆ ಮಾಡಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ , ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು ಆದ ಡಾ. ಬಿ. ಧನಂಜಯ ಅವರು ಭಾಗವಹಿಸಿ ತರಕಾರಿ ಬೆಳೆಯ ಉತ್ಪಾದಕತೆ ಹೆಚ್ಚಿಸಲು ನೀರು ಹಾಗೂ ಮಣ್ಣಿನ ಸಂರಕ್ಷಣೆಗೆ ಪ್ಲಾಸ್ಟಿಕ್ ಹೊದಿಕೆ ಮತ್ತು ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳುವುದರ ಬಗ್ಗೆ ಮಾಹಿತಿ ನೀಡಿದರು. ಬದನೆ ಬೆಳೆಯಲ್ಲಿ ಪೊಟ್ರೇ ಬಳಸಿ ಸಸಿ ಮಡಿಗಳ ತಯಾರಿ, ಬುಡಕೊಳೆರೋಗದ ನಿಯಂತ್ರಣಕ್ಕೆ ಅರ್ಕ ಸೂಕ್ಷ್ಮ ಜೀವಿಗಳ ಮಿಶ್ರಣ ಬಳಸುವುದರ ಬಗ್ಗೆ ಮತ್ತು ಕಾಂಡ ಕೊರಕ ಮತ್ತು ಹಣ್ಣು ಕೊರಕಗಳ ನಿರ್ವಹಣೆಗೆ ಫೋಟಾಟ್ರಾಪ್ ಬಳಸುವುದರ ಬಗ್ಗೆ ರೈತರಿಗೆ ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡಲಾಯಿತು. ಸುಮಾರು 20 ರೈತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

ಕೃಷಿ ಮೇಳ ಅಕ್ಟೋಬರ್ 19, 20, ವಿಚಾರ ಸಂಕಿರಣ, ವಸ್ತು ಪ್ರದರ್ಶನ

ಕೃಷಿ ವಿಜ್ಞಾನ ಕೇಂದ್ರ, ವಲಯ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರದಲ್ಲಿ ಅ.19 ಮತ್ತು 20ರಂದು ಕೃಷಿ ಮೇಳ ಜರುಗಿತು. ಉದ್ಘಾಟನಾ ಸಮಾರಂಭ ಬಳಿಕ ಗೇರು ಮತ್ತು ಇತರ ತೋಟಗಾರಿಕೆ ಬೆಳೆಗಳ ವಿಚಾರ ಸಂಕಿರಣ ನಡೆಯಿತು. 2ನೇ ದಿನ ಲಾಭದಾಯಕ ಸಮಗ್ರ ಕೃಷಿ ಪದ್ಧತಿಗಳು, ನೆಲ ಜಲ ಸಂರಕ್ಷಣೆ , ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಮತ್ತು ಹೈ-ಟೆಕ್ ತೋಟಗಾರಿಕೆ ಎಂಬ ವಿಚಾರ ಸಂಕಿರಣಗಳನ್ನು ಏರ್ಪಡಿಸಲಾಗಿತ್ತು. ಇಲಾಖಾ ಮುಖ್ಯಸ್ಥರು, ಹಿರಿಯ ವಿಜ್ಞಾನಿಗಳು, ಪ್ರಗತಿಪರ ಕೃಷಿಕರು ವಿಷಯ ತಜ್ಞರಾಗಿ ಭಾಗವಹಿಸಿ ಮಾಹಿತಿಯನ್ನು ನೀಡಿದರು. ರೈತರು ಮುಕ್ತವಾಗಿ ಮುಖಾ ಮುಖಿ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಕೃಷಿ ಸಂಬಂಧಿತ ಸಮಸ್ಯೆಗಳಿಗೆ ಪರಿಹಾರಗಳನ್ನು ಪಡೆಯಲು ಅವಕಾಶವಾಯಿತು. ಮುಖ್ಯವಾಗಿ ವಿವಿಧ ಭತ್ತದ ತಳಿಗಳು ಮತ್ತು ಬೀಜೋತ್ಪಾದನೆ, ಭತ್ತದಲ್ಲಿ ಚಾಪೆ ನೇಜಿ ತಯಾರಿ ಮತ್ತು ಶ್ರೀ ಪದ್ಧತಿ ಬೇಸಾಯ. ತೆಂಗಿನಲ್ಲಿ ಹೂಬಾಳೆ ಯೋಜನೆ ಮತ್ತು ಪೋಷಕಾಂಶಗಳ ನಿರ್ವಹಣೆ. ತೋಟಗಾರಿಕಾ ಬೆಳೆಗಳಲ್ಲಿ ಕಸಿ ಕಟ್ಟುವಿಕೆ, ಛಾವಣಿ ಕೈತೋಟ ಮತ್ತು ಮಡಹಾಗಲ ಪ್ರಾತ್ಯಕ್ಷಿಕೆ. ಸಾವಯವ ಗೊಬ್ಬರ, ಕಾಂಪೋಸ್ಟ್, ಎರೆಗೊಬ್ಬರ ಮತ್ತು ಅಜೋಲ್ಲಾ ಗೊಬ್ಬರ ತಯಾರಿಕೆಯ ಪ್ರಾತ್ಯಕ್ಷಿಕೆ. ಹೈನುಗಾರಿಕೆ, ಮೀನುಗಾರಿಕೆ ಆಡು, ಮೊಲ, ಕೋಳಿ, ಹಂದಿ ಮತ್ತು ಬಾತುಕೋಳಿ ಸಾಕಾಣಿಕೆ ಪ್ರಾತ್ಯಕ್ಷಿಕೆ ಹೈಡ್ರೋಪೋನಿಕ್ಸ್ ವಿಧಾನದಲ್ಲಿ ಮೇವಿನ ಹುಲ್ಲಿನ ಪ್ರಾತ್ಯಕ್ಷಿಕೆ, ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆ. ಜೈವಿಕ ಅನಿಲ ಉತ್ಪಾದನ ಘಟಕಗಳ ವೀಕ್ಷಣೆ, ಮೌಲ್ಯಧಾಂತ ಆಹಾರ ಉತ್ಪನ್ನಗಳು ಮತ್ತು ಪ್ರಾತ್ಯಕ್ಷಿಕೆ, ಅಲಂಕಾರಿ ಗಿಡಗಳ ಪ್ರದರ್ಶನ ಮತ್ತು ಮಾರಾಟ, ಕೃಷಿ ವಸ್ತು ಪ್ರದರ್ಶನ ಆಯೋಜಿಸಲಾಗಿತ್ತು. ಕೃಷಿಮೇಳದಲ್ಲಿ ಸುಮಾರು 20 ಮಳಿಗೆಗಳು ಇದ್ದವು.

ಕೃಷಿ ಮೇಳದಲ್ಲಿ ಪ್ರಮುಖ ಆಕರ್ಷಣೆಯಾಗಿದ್ದು ಕೃಷಿ ವಸ್ತು ಪ್ರದರ್ಶನ, ಕೃಷಿಗೆ ಸಂಬಂಧಿ ಹಲವು ಬೆಳೆಗಳು ಮತ್ತು ರೋಗಗ ಮಾಹಿತಿ ಮತ್ತು ಪರಿಚಯ ಮಾಡಿಕೊಡುವುದು ಮೇಳದಲ್ಲಿ ಪ್ರಮುಖ ಅಂಶವಾ ಕಂಡುಬಂತು. ಶೂನ್ಯ ಬಂಡವಾಳ ಕೃಷಿಯ ಮಾದರಿ ಪ್ರಮುಖ ಆಕರ್ಷಣೆಯಾಯಿತ ಪ್ರಥಮ ಬಾರಿಗೆ ಅಳವಡಿಸಿರುವ ಈ ಮಾದರಿಯಲ್ಲಿ ಹೊದಿಕೆ ನಿರ್ಮಾಣದಲ್ಲಿ ಹೊದಿ ನಿರ್ಮಾಣ, ಬೀಜಾಮೃತ ತಯಾರಿಸುವ ವಿಧಾನ, ಅಗ್ನಿ ಅಸ್ತ್ರ, ಶುಂಠಿ ಅಸ್ತ್ರ ಕರಿಮೆಣಸಿ

ಬ್ರಹ್ಮಾವರ ಇವರು ಮಾತನಾಡುತ್ತ ಭಾರತವು ಅತ್ಯಂತ ಹೆಚ್ಚು ಹಾಲು ಉತ್ಪಾದನೆ ಮಾಡುವ ದೇಶ ಎಂದು ತಿಳಿಸಿದರು. ಹೈನುಗಾರಿಕೆ ಎಷ್ಟೋ ಜನರಿಗೆ ತಮ್ಮ ಬದುಕು ರೂಪಿಸಿಕೊಳ್ಳಲು ಸಹಾಯ ಆಗಿದೆ ಎಂದರು ಹಾಗೆ ಹಾಲು ಉತ್ಪಾದನೆ ಬೆಳೆದು ಬಂದ ಹಾದಿಯನ್ನು ಸಂಕ್ಷಿಪ್ತವಾಗಿ ತಿಳಿಸಿದರು.

ಇನ್ನೋರ್ವ ಮುಖ್ಯ ಅಥಿತಿಗಳಾದ ಶ್ರೀ ಗೋಪಾಲ ಪೂಜಾರಿ, ಸದಸ್ಯರು, ವೈಜ್ಞಾನಿಕ ಸಲಹಾ ಸಮಿತಿ, ಕೆ.ವಿ.ಕೆ, ಬ್ರಹ್ಮಾವರ ಇವರು ಮಾತಾನಾಡುತ್ತ ರೈತನಿಗೆ ಕಲಿಕೆ ಎನ್ನುವುದು ಯಾವತ್ತಿಗೂ ಮುಗಿಯದ ವಿದ್ಯೆ ಎಂದರು.

ಇನ್ನೋರ್ವ ಮುಖ್ಯ ಅಥಿತಿಗಳಾದ ಶ್ರೀ ಜ್ಞಾನದೇವ್, ಪ್ರಗತಿಪರ ಕೃಷಿಕರು, ಸಾಣೂರು ಅವರು ಮಾತಾನಾಡುತ್ತ ಭತ್ತದ ಬೆಳೆ ಯಾವತ್ತಿಗೂ ಬತ್ತಿ ಹೋಗದ ಬೆಳೆ ಎಂದರು.

ಶ್ರೀ ಶ್ರೀನಿವಾಸ್ ಹೆಚ್. ಹುಲಕೋಟಿ, ವಿಜ್ಞಾನಿಗಳು (ಮೀನುಗಾರಿಕೆ), ಕೆ.ವಿ.ಕೆ, ಬ್ರಹ್ಮಾವರ ಸರ್ವರನ್ನು ಸ್ವಾಗತಿಸಿದರು.
ಡಾ. ಎನ್. ಈ. ನವೀನ್, ವಿಜ್ಞಾನಿಗಳು (ಬೇಸಾಯ ಶಾಸ್ತ್ರ), ಕೆ.ವಿ.ಕೆ, ಬ್ರಹ್ಮಾವರ, ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

ಹಾಲು ಬೆಂಡೆಯಲ್ಲಿ ಹಳದಿ ನಂಜು ರೋಗದ ನಿರ್ವಹಣೆಯ ಮುಂಚೂಣಿ ಪ್ರಾತ್ಯಕ್ಷಿಕೆ

ಕೃಷಿ ವಿಜ್ಞಾನ ಕೇಂದ್ರ ಬ್ರಹ್ಮಾವರ ಇವರ ವತಿಯಿಂದ, ಕೊಕ್ಕರ್ಣೆಯ ಸಾಸ್ತಾವು ಗ್ರಾಮದ ದೇವಣ್ಣ ನಾಯ್ಕರವರ ಮನೆಯ ವಠಾರದಲ್ಲಿ ದಿನಾಂಕ 26.11.2019 ರಂದು ನಡೆದ ಹಾಲು ಬೆಂಡೆಯಲ್ಲಿ ಹಳದಿ ನಂಜುರೋಗದ ನಿರ್ವಹಣೆಯ ಕೃಷಿ ವಿಜ್ಞಾನ ಕೇಂದ್ರ ಬ್ರಹ್ಮಾವರ ಇವರ ವತಿಯಿಂದ, ಕೊಕ್ಕರ್ಣೆಯ ಸಾಸ್ತಾವು ಗ್ರಾಮದ ದೇವಣ್ಣ ನಾಯ್ಕರವರ ಮನೆಯ ವಠಾರದಲ್ಲಿ ದಿನಾಂಕ 26.11.2019 ರಂದು ನಡೆದ ಹಾಲು ಬೆಂಡೆಯಲ್ಲಿ ಹಳದಿ ನಂಜುರೋಗದ ನಿರ್ವಹಣೆಯ ಮುಂಚೂಣಿ ಪ್ರಾತ್ಯಕ್ಷಿಕೆಯ ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳಾದ ಚೈತನ್ಯ ಹೆಚ್.ಎಸ್. ರವರು ಮಾತಾನಾಡಿ ಬೆಂಡೆ ಹಾಗೂ ಇತರೆ ತರಕಾರಿ ಬೆಳೆಗಳ ಬೇಸಾಯ ಕ್ರಮದ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ನಂತರ ಕೀಟಶಾಸ್ತ್ರಜ್ಞರಾದ ಡಾ. ಸಚಿನ್.ಯು.ಎಸ್ ರವರು ಮಾತಾನಾಡಿ, ಬೆಂಡೆ ಬೆಳೆಯಲ್ಲಿ, ಹಳದಿ ನಂಜುರೋಗದ ಸಂಪೂರ್ಣ ಮಾಹಿತಿಯೊಂದಿಗೆ ಅದರ ಸಮಗ್ರ ನಿರ್ವಹಣೆಯ ವಿಧಾನಗಳಾದ, ಬೀಜೋಪಚಾರ, ಸಸಿ ಮಡಿಗಳ ತಯಾರಿಕೆ, ಹಳದಿ ಹಾಗೂ ನೀಲಿ ಅಂಟುಬಲೆಗಳ ಅಳವಡಿಕೆ ಬೇವಿನ ಉತ್ಪನ್ನಗಳಾದ, ಹಿಂಡಿ ಮತ್ತು ಬೇವಿನ ಎಣ್ಣೆಯ ಬಳಕೆಯ ಜೊತೆಗೆ ಕೀಟನಾಶಕಗಳ ಸಮರ್ಪಕ ಬಳಕೆಯ ಬಗ್ಗೆ ಮಾಹಿತಿ ನೀಡಿದರು. ಹಳದಿ ನಂಜು ರೋಗವು ಬಿಳಿನೊಣ ಎಂಬ ಕೀಟದಿಂದ ಹರಡುವುದರಿಂದ ಕೀಟದ ಹತೋಟಿಯು ಬಹಳ ಮುಖ್ಯ ಎಂದು ರೈತರಿಗೆ ವಿವರಣೆ ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ ಕೇಂದ್ರದ ವತಿಯಿಂದ ಆಯ್ದು ರೈತರಿಗೆ ಹಳದಿ ನಂಜುರೋಗದ ನಿರ್ವಹಣೆಯ ಪರಿಕರಗಳನ್ನು ವಿತರಿಸಿ, ಪ್ರಾತ್ಯಕ್ಷಿಕೆಯನ್ನು ಮಾಡಲಾಯಿತು.

ವಸಂತನಾಯ್ಕ, ಗ್ರಾಮ ಪಂಚಾಯತ್ ಸದಸ್ಯರು, ಕೊಕ್ಕರ್ಣೆ ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸುರೇಶ್ ನಾಯ್ಕರವರು ಕಾರ್ಯಕ್ರಮವನ್ನು ನಿರೂಪಿಸಿದರು.

ಕಲ್ಲಂಗಡಿ ಬೆಳೆಯಲ್ಲಿ ರಸ ಹೀರುವ ಕೀಟಗಳು ಮತ್ತು ಸುಳಿ ನಂಜು ರೋಗದ ನಿರ್ವಹಣೆಯ ಮುಂಚೂಣಿ ಪ್ರಾತ್ಯಕ್ಷಿಕೆ

ಕೃಷಿ ವಿಜ್ಞಾನ ಕೇಂದ್ರ ಬ್ರಹ್ಮಾವರ, ಉಡುಪಿ ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ಕುಂದಾಪುರ, ರೈತಸಂಪರ್ಕ ಕೇಂದ್ರ, ಬೈಂದೂರು ಹಾಗೂ ಖಂಬದ ಕೋಣೆ ರೈತರ ಸೇವಾ ಸಹಕಾರಿ ಸಂಘ ನಿ. ಉಪ್ಪುಂದ ಹಾಗೂ ಆತ್ಮ ಯೋಜನೆಯಡಿಯಲ್ಲಿ, ರೈತಸಿರಿ ಸಭಾಭವನ, ಉಪ್ಪುಂದದಲ್ಲಿ ನಡೆದ ಕಲ್ಲಂಗಡಿ ಬೇಸಾಯ ತರಬೇತಿ ಹಾಗೂ ಕಲ್ಲಂಗಡಿ ಬೆಳೆಯಲ್ಲಿ ರಸಹೀರುವ ಕೀಟಗಳು ಮತ್ತು ಸುಳಿ ನಂಜುರೋಗದ ನಿರ್ವಹಣೆಯ ಮುಂಚೂಣಿ ಪ್ರಾತ್ಯಕ್ಷಿಕೆಯಲ್ಲಿ ಕೇಂದ್ರದ ವಿಜ್ಞಾನಿಗಳಾದ ಡಾ.ಸಚಿನ್.ಯು.ಎಸ್.ರವರು ಮಾತನಾಡಿ, ಕಲ್ಲಂಗಡಿ ಬೆಳೆಯ ಬೇಸಾಯ ಕ್ರಮದ ಸಂಪೂರ್ಣ ಮಾಹಿತಿಯೊಂದಿಗೆ, ಅದರಲ್ಲಿ ವಿವಿಧ ಜೈವಿಕ ಗೊಬ್ಬರಗಳ ಬಳಕೆ, ಕೀಟ ಮತ್ತು ರೋಗದ ಹತೋಟಿಗಾಗಿ ವಿವಿಧ ಬಲೆಗಳ, ಜೊತೆಗೆ ವಿವಿಧ ಔಷಧಿಗಳ ಬಳಕೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ಇನ್ನೋರ್ವ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ. ಹೆಚ್.ರಂಜನ್ ಶೆಟ್ಟಿ, ಮಾಜಿ ಪ್ರಾದೇಶಿಕ ನಿರ್ದೇಶಕರು, ನಾಮಧಾರಿ ಸೀಡ್ಸ್ ಪ್ರೈ.ಲಿ. ಬೆಂಗಳೂರು ಇವರು ಮಾತಾನಾಡಿ, ಸೂಕ್ತ ಬೀಜಗಳ ಆಯ್ಕೆ ಮತ್ತು ಹನಿನೀರಾವರಿಯ ಜೊತೆಗೆ ರಸಗೊಬ್ಬರಗಳ ಬಳಕೆಯ ಕುರಿತಾಗಿ ಸಂಪೂರ್ಣ ಮಾಹಿತಿ ನೀಡಿದರು. ಶ್ರೀ ಸಂಜೀವ ನಾಯ್ಕ, ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು, ಕುಂದಾಪುರ ಇವರು ಮಾತನಾಡಿ, ಕಲ್ಲಂಗಡಿ ಬೆಳೆಯ ಮಹತ್ವ ಮತ್ತು ಸರಕಾರದ ವತಿಯಿಂದ ಬೆಳೆಗೆ ಸಿಗುವ ಅನುದಾನದ ಕುರಿತಾಗಿ ಮಾಹಿತಿ ನೀಡಿದರು. ಶ್ರೀ ಪುಂಡರೀಕ ಮದ್ಯಸ್ಥ, ಪ್ರಗತಿಪರ ಕೃಷಿಕರು, ಕಿರಿಮಂಜೇಶ್ವರರವರು ಕಲ್ಲಂಗಡಿ ಬೆಳೆಯಲ್ಲಿ ಸಾವಯವ ಕೃಷಿಯ ಮಹತ್ವದ ಬಗ್ಗೆ ವಿವರಣೆ ನೀಡಿದರು.

ಶ್ರೀಮತಿ ದುರ್ಗವ್ವ, ಅಧ್ಯಕ್ಷರು ಗ್ರಾಮ ಪಂಚಾಯತ್ ಉಪ್ಪುಂದ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು, ಶ್ರೀ ಸತೀಶ್ ದಿಟ್ಟಾಡಿ, ಸದಸ್ಯರು ಜಿಲ್ಲಾ ಪಂಚಾಯತ್ ಸದಸ್ಯರು, ಉಡುಪಿ, ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಪ್ರಮೀಳಾ ದೇವಾಡಿಗ, ಸದಸ್ಯರು, ತಾಲೂಕು ಪಂಚಾಯತ್ ಕುಂದಾಪುರ, ಶ್ರೀಮತಿ ಸಿಂಗಾರಿ ಶೆಟ್ಟಿ, ಉಪಾಧ್ಯಕ್ಷರು ಗ್ರಾಮ ಪಂಚಾಯತ್ ಉಪ್ಪುಂದ, ಶ್ರೀಮತಿ ರೂಪ ಜೆ.ಮಾಡ, ಸಹಾಯಕ ಕೃಷಿ ನಿರ್ದೇಶಕರು, ಕುಂದಾಪುರ, ಶ್ರೀ.ಎಸ್. ಪ್ರಕಾಶ್ಚಂದ್ರ ಶೆಟ್ಟಿ, ಅಧ್ಯಕ್ಷರು ಖಂಬದಕೋಣೆ, ರೈತರ ಸೇವಾ ಸಹಕಾರಿ ಸಂಘ ನಿ. ರವರು ಉಪಸ್ಥಿತರಿದ್ದರು ಶ್ರೀ ಈಶ್ವರ್ ನಾಯಕ್ ರವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

ಸಂಪಾದಕರು: ಡಾ. ಬಿ. ಧನಂಜಯ
ಸಹ ಸಂಪಾದಕರು: ಶ್ರೀ ಚೈತನ್ಯ ಹೆಚ್. ಎಸ್., ಡಾ. ಎನ್. ಈ. ನವೀನ್, ಡಾ. ಜಯ ಪ್ರಕಾಶ್ ಆರ್., ಶ್ರೀ ಶ್ರೀನಿವಾಸ ಹೆಚ್. ಹುಲಕೋಟಿ, ಡಾ. ಸಚಿನ್ ಯು. ಎಸ್.
ಅಕ್ಷರ ಜೋಡಣೆ : ಶ್ರೀಮತಿ ಶೈಲಜ ಮತ್ತು ಶ್ರೀಮತಿ ಸುಷ್ಮಾ
ಪ್ರಕಾಶಕರು: ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಉಡುಪಿ–576213
ದೂರವಾಣಿ ಸಂಖ್ಯೆ: 0820–2563923, Email: kvkudupi@gmail.com, udupikvk@gmail.com